2019 ಕ.ತೀ.ವ 391

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ

## ಕಲ್ಲಪ್ಪ ಮತ್ತು ಇತರರು –ವಿರುದ್ಧ– ಶ್ರೀಮತಿ ನಾಗಮ್ಮ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ಆದೇಶ 47 ಕ್ರಮಾದೇಶ 1ರ ಅಡಿಯಲ್ಲಿ ಪುನರವಲೋಕನಾ ಅರ್ಜಿ.

ದಿನಾಂಕ: 17.11.2004ರಲ್ಲಿ ರಿಟ್ ಅರ್ಜಿ ಸಂಖ್ಯೆ: 7988/2002(ಎಸ್‌ಸಿ/ಎಸ್‌ಟಿ) ಅರ್ಜಿಯನ್ನು ಬಗೆಹರಿಸಿದ ಆದೇಶವನ್ನು ಪುನರವಲೋಕನ ಮಾಡಿ ಆದೇಶ ಮಾಡುವಂತೆ ಕೋರಿ ಸದರಿ ಪುನರವಲೋಕನಾ ಅರ್ಜಿ.

ಅರ್ಜಿದಾರರು ಏಕ ಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ರಿಟ್ ಮೇಲ್ಮನವಿಯನ್ನು ಸಲ್ಲಿಸಿ ತದನಂತರ ಮೆಮೋ ಮೇಲ್ಮನವಿಯನ್ನು ವಿಲೇಖನಗೊಳಿಸಿಕೊಂಡಿರುತ್ತಾರೆ. ಈ ಕಾರಣದಿಂದ ರಿಟ್ ಅರ್ಜಿಯ ಮೇಲೆ ಏಕ ಸದಸ್ಯ ಪೀಠವು ನೀಡಿದ ಆದೇಶವನ್ನು ಪುನರವಲೋಕನ ಮಾಡಲು ಯಾವುದೇ ಸಕಾರಣವಿಲ್ಲವೆಂದು ಅಭಿಪ್ರಾಯಪಟ್ಟು ಉಚ್ಚ ನ್ಯಾಯಾಲಯವು ಸದರಿ ಪುನರವಲೋಕನ ಅರ್ಜಿಯನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

*1. ಎಐಆರ್ 1996 ಎಸ್‌ಸಿ 2592*
*ಇಂಡಿಯನ್ ಬ್ಯಾಂಕ್ –ವಿರುದ್ಧ–*
*ಮೆ|| ಸತ್ಯಂ ಫೈಬರ್ಸ್ (ಇಂಡಿಯಾ) ಪ್ರೈ. ಲಿಮಿಟೆಡ್ (ಪ್ಯಾರಾ) 10(i)*

*ಪುನರವಲೋಕನ ಅರ್ಜಿ ಸಂಖ್ಯೆ: 248/2014, ದಿನಾಂಕ 15ನೇ ಮಾರ್ಚ್, 2017.

2. ಎಐಆರ್ 2000 ಎಸ್‌ಸಿ 1165
ಯುನೈಟೆಡ್ ಇಂಡಿಯಾ ಇನ್ಸುರೇನ್ಸ್ ಕಂಪನಿ ಲಿಮಿಟೆಡ್
–ವಿರುದ್ಧ– ರಾಜೇಂದ್ರ ಸಿಂಗ್ ಮತ್ತು ಇತರರು (ಪ್ಯಾರಾ) 10 (ii)
3. ಎಐಆರ್ 1994 ಎಸ್‌ಸಿ 853
ಎಸ್.ಪಿ. ಚಂಗಲರಾಯ ನಾಯ್ಡು ಇವರ ಕಾನೂನು ವಾರಸುದಾರರು
–ವಿರುದ್ಧ– ಜಗನ್ನಾಥ ಇವರ ಕಾನೂನು ವಾರಸುದಾರರು
ಮತ್ತು ಇತರರು (ಪ್ಯಾರಾ) 10 (iii)
4. (2005) 4 ಎಸ್‌ಸಿಸಿ 605
ಎಮ್‌ಸಿಡಿ –ವಿರುದ್ಧ–
ದೆಹಲಿ ರಾಜ್ಯ ಮತ್ತು ಮತ್ತೊಬ್ಬರು (ಪ್ಯಾರಾ) 10 (iv)
5. (2007) 8 ಎಸ್‌ಸಿಸಿ 751
ಟಿ. ವಿಜೇಂದ್ರದಾಸ್ ಮತ್ತು ಮತ್ತೊಬ್ಬರು –ವಿರುದ್ಧ–
ಎಂ. ಸುಬ್ರಮಣಿಯಣ್ ಮತ್ತು ಇತರರು (ಪ್ಯಾರಾ) 10 (v)
6. ಎಐಆರ್ 2000 ಎಸ್‌ಸಿ 2587
ಕುಂಯಮ್ಮದ್ ಮತ್ತು ಇತರರು –ವಿರುದ್ಧ–
ಕೇರಳ ರಾಜ್ಯ ಮತ್ತು ಇತರರು (ಪ್ಯಾರಾ) 13 (i)
7. (2011) 8 ಎಸ್‌ಸಿಸಿ 679
ಭಕ್ಷಿ ದೇವ್‌ರಾಜ್ (2) ಮತ್ತು ಮತ್ತೊಬ್ಬರು
–ವಿರುದ್ಧ– ಸುಧೀರ್ ಕುಮಾರ್ (ಪ್ಯಾರಾ) 13 (ii)
8. (2014) 5 ಎಸ್‌ಸಿಸಿ 75
ಡಾ॥ ಸುಬ್ರಮಣಿಯಣ್ ಸ್ವಾಮಿ –ವಿರುದ್ಧ–
ತಮಿಳುನಾಡು ರಾಜ್ಯ ಮತ್ತು ಇತರರು (ಪ್ಯಾರಾ) 13 (iii)
9. (2011) 4 ಎಸ್‌ಸಿಸಿ 602
ಗಂಗಾಧರ ಪಾಲೋ –ವಿರುದ್ಧ– ಕಂದಾಯ
ವಿಭಾಗೀಯ ಅಧಿಕಾರಿ ಮತ್ತು ಮತ್ತೊಬ್ಬರು (ಪ್ಯಾರಾ) 14

ಅಪೀಲುದಾರರ ಪರ : ಶ್ರೀ ಜಯಕುಮಾರ್ ಎಸ್. ಪಾಟೀಲ್, ಹಿರಿಯ ನ್ಯಾಯಾವಾದಿ ಪರವಾಗಿ ಶ್ರೀ ಆರ್. ಚಂದ್ರಣ್ಣ, ವಕೀಲರು

1, 2, (ಎ–ಸಿ) 3, 5 ಮತ್ತು 6 ನೇ (ಎ–ಡಿ);

ಪ್ರತ್ಯರ್ಜಿದಾರರ ಪರ : ಶ್ರೀ ಟಿ. ಶೇಷಗಿರಿ ರಾವ್ ಮತ್ತು ಶ್ರೀ ಸುನ್ನಿ ಎಸ್. ರಾವ್, ವಕೀಲರು.

7 ಮತ್ತು 8 ನೇ ಪ್ರತ್ಯರ್ಜಿದಾರರ ಪರ: ಶ್ರೀ ದಿಲ್‌ದಾರ್ ಶಿರಹಳ್ಳಿ, ಹೆಚ್‌ಸಿಜಿಪಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ:**

ಪುನರವಲೋಕನ ಅರ್ಜಿಯಲ್ಲಿ, ಜೊತೆಗೆ ರಿಟ್ ಅರ್ಜಿಯಲ್ಲಿ ದಾಖಲು ಮಾಡಿದ ಅರ್ಜಿಗಳಲ್ಲಿ, ರಿಟ್ ಅಪೀಲು ಸಂಖ್ಯೆ: 7988/2002 (ಎಸ್‌ಸಿ/ಎಸ್‌ಟಿ)ರಲ್ಲಿ ಮಾಡಿದ ದಿನಾಂಕ: 17.11.2004ರ ಆದೇಶವನ್ನು ತಪ್ಪಿಸುವ ಆಕ್ಷೇಪಣೆಯೊಂದಿಗೆ ಅಂತಿಮ ಪರಿಹಾರವನ್ನು ಕೋರಿದ್ದಾರೆ. ಹಾಗಾಗಿ, ಅರ್ಜಿಗಳೊಂದಿಗೆ ಈ ಅರ್ಜಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಸಾಮಾನ್ಯ ಆದೇಶದ ಮೂಲಕ ಪರಿಗಣಿಸಲಾಗಿದೆ ಮತ್ತು ವಿಲೆ ಮಾಡಲಾಗಿದೆ.

2. 3300 ದಿನಗಳಿಗಿಂತ ಹೆಚ್ಚಾದ ದೀರ್ಘಕಾಲದ ವಿಳಂಬವನ್ನು ದೃಷ್ಟಿಯಲ್ಲಿಟ್ಟುಕೊಂಡು, ಪುನರವಲೋಕನ ಅರ್ಜಿಯನ್ನು ಹಾಗೂ ರಿಟ್ ಅರ್ಜಿಯಲ್ಲಿನ ದಿನಾಂಕ: 17.11.2004ರ ಆದೇಶವನ್ನು ವಾಪಸ್ಸು ಪಡೆದುಕೊಳ್ಳುವುದಕ್ಕಾಗಿ ಅರ್ಜಿಯನ್ನು ಸಹ ಸಲ್ಲಿಸಲಾಗಿದ್ದು, ಎರಡನ್ನೂ ಮನ್ನಾ ಮಾಡಲು ಕೋರಲಾಗಿದೆ ಮತ್ತು ವಿಳಂಬವನ್ನು ಮನ್ನಾ ಮಾಡಲು ನೀಡಿದ ಕಾರಣ, ಪುನರವಲೋಕನಕ್ಕಾಗಿ ಹಾಗೂ ವಾಪಸ್ಸು ಪಡೆದುಕೊಳ್ಳಲು ಒತ್ತಿಹೇಳಿದ ಕಾರಣಗಳನ್ನು ಸಹ ಪರಿಗಣಿಸುವುದಕ್ಕೆ ಸಂಬಂಧಿಸಿದ್ದು, ಗುಣಾರ್ಹತೆಗಳ ಮೇಲಿನ ವಾದಗಳನ್ನು, ಅರ್ಜಿಯ ಸಮರ್ಥನೀಯತೆಯನ್ನು ಪರಿಗಣಿಸುವ ಸಲುವಾಗಿ ಗಮನಕ್ಕೆ ತೆಗೆದುಕೊಳ್ಳಲಾಗಿದೆ.

3. ರಿಟ್ ಅರ್ಜಿಯಲ್ಲಿ ಸೂಚಿಸಿದ ವಾದಕ್ಕೆ ವಿರುದ್ಧವಾಗಿ, ಪುನರವಲೋಕನ ಅರ್ಜಿಯಲ್ಲಿ ಪಕ್ಷಕಾರರು ವಿಭಿನ್ನ ವಾದವನ್ನು ಮಂಡಿಸಿರುವುದರಿಂದ, ಖಾಸಗೀ ಪಕ್ಷಕಾರರನ್ನು, ಸಂದರ್ಭವು ಹಾಗೆ ಅವಕಾಶ ನೀಡದಂತೆ ಮತ್ತು ನೀಡಿದಾಗಲೆಲ್ಲ ಖರೀದಿದಾರ ಮತ್ತು ಮಂಜೂರಾತಿ ಪಡೆದವನೆಂದು ಉಲ್ಲೇಖಿಸಲಾಗಿದೆ. ಆರ್.ಪಿ.ಸಂಖ್ಯೆ: 248/2014ರಲ್ಲಿ 1ರಿಂದ 6ರವರೆಗಿನ ಪ್ರತ್ಯರ್ಜಿದಾರರಾಗಿರುವ ರಿಟ್ ಅಪೀಲು ಸಂಖ್ಯೆ: 7988/2002ರಲ್ಲಿನ 1ರಿಂದ 6ರವರೆಗಿನ ಅರ್ಜಿದಾರರು, 'ಮಂಜೂರಾತಿ ಪಡೆದವ'ರಾಗಿರುತ್ತಾರೆ. ಆರ್.ಪಿ. ಸಂಖ್ಯೆ: 248/2014ರಲ್ಲಿ ಅರ್ಜಿದಾರರಾಗಿರುವ, ರಿಟ್ ಅಪೀಲು ಸಂಖ್ಯೆ: 7988/2002ರಲ್ಲಿನ 1ರಿಂದ 6ರವರೆಗಿನ ಪ್ರತ್ಯರ್ಜಿದಾರರು, 'ಖರೀದಿದಾರ'ರಾಗಿರುತ್ತಾರೆ.

4. ಈ ಅರ್ಜಿಯಲ್ಲಿ ವಿವಾದದಲ್ಲಿರುವ ಜಮೀನು, ಸರ್ವೇ ನಂ. 27, ದೊಡ್ಡ ಸಾಗರಹಳ್ಳಿ ಗ್ರಾಮ, ದೇವನಹಳ್ಳಿ ತಾಲ್ಲೂಕಿನಲ್ಲಿದ್ದು, 5 ಎಕರೆಗಳು ಮತ್ತು 11 ಗುಂಟೆಗಳ ವಿಸ್ತೀರ್ಣದ ಸ್ವತ್ತಾಗಿದೆ. ಇದು, 'ಬೋವಿ' ಸಮುದಾಯಕ್ಕೆ ಸೇರಿರುವ ವ್ಯಕ್ತಿಯಾದ ಮೃತ ದೊಡ್ಡತಿಮ್ಮಯ್ಯ, ಮಂಜೂರಾತಿ ಪಡೆದವರ ಸಂಬಂಧದ ಕ್ಲೇಮು ಆಗಿದೆ. ಪ್ರಶ್ನಿತ ಜಮೀನು ದಿನಾಂಕ: 26.04.1938ರಂದು ಮಂಜೂರಾದ ಸ್ವತ್ತಾಗಿದೆ ಮತ್ತು ಅದನ್ನು, ಮುನಿವೀರಪ್ಪ ಎಂಬುವವರಿಗೆ ದಿನಾಂಕ: 11.07.1951ರಂದು ಮಾರಾಟ ಕ್ರಯಪತ್ರದ ಮೇರೆಗೆ ದೊಡ್ಡತಿಮ್ಮಯ್ಯನ ಮಗ ವೆಂಕಟರಾಯಪ್ಪ ಮಾರಾಟ ಮಾಡಿದ್ದಾನೆಂದು ಕ್ಲೇಮು ಮಾಡಲಾಗಿದೆ. ಆ ನಂತರ, ತರುವಾಯದ ವ್ಯವಹರಣೆಗಳು ನಡೆದಿದ್ದು, ಅವುಗಳ ಆಧಾರದ ಮೇಲೆ ಖರೀದಿದಾರರು, ಪ್ರಸ್ತುತ ಸ್ವತ್ತಿನ ಹಕ್ಕನ್ನು ಕ್ಲೇಮು ಮಾಡಿದ್ದಾರೆ. ಇದರಲ್ಲಿನ ಮಂಜೂರಾತಿ ಪಡೆದವರ ಪ್ರಕಾರ, ಸದರಿ ಜಮೀನಿನ ಸಂಬಂಧದಲ್ಲಿನ ಮಾರಾಟವು, ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು (ಕೆಲವು ಭೂಮಿಗಳ ವರ್ಗಾವಣೆ ನಿಷೇದ) ಅಧಿನಿಯಮ, 1978 (ಸಂಕ್ಷಿಪ್ತವಾಗಿ ಪಿಟಿಸಿಎಲ್ ಅಧಿನಿಯಮ)ದಲ್ಲಿರುವ ಉಪಬಂಧಗಳ ಉಲ್ಲಂಘನೆಯಾಗಿದೆ.

5. ಅದಕ್ಕನುಸಾರವಾಗಿ, ಪಿಟಿಸಿಎಲ್ ಅಧಿನಿಯಮದ ಉಪಬಂಧಗಳ ಮೇರೆಗೆ ಉಪ-ವಿಭಾಗಾಧಿಕಾರಿಯವರ ಮುಂದೆ ಮಂಜೂರಾತಿ ಪಡೆದವರು ಅರ್ಜಿಯನ್ನು, ಸಲ್ಲಿಸಿದ್ದರು. ಲಭ್ಯವಿರುವ ದಸ್ತಾವೇಜುಗಳ ಆಧಾರದ ಮೇಲೆ ಮಂಜೂರಾತಿ ಪಡೆದವರು ದಲಿತ ವರ್ಗಕ್ಕೆ ಸೇರಿರುವವರೆಂಬುದನ್ನು ಗಮನಕ್ಕೆ ತೆಗೆದುಕೊಂಡು, ದಿನಾಂಕ: 26.09.2000ರ ಆದೇಶದ ಮೂಲಕ ಉಪ-ವಿಭಾಗಾಧಿಕಾರಿಯವರು ಮಾರಾಟ ವ್ಯವಹರಣೆಗಳನ್ನು ಅಸಿಂಧುಗೊಳಿಸಿದ್ದಾರೆ ಮತ್ತು ಆ ಭೂಮಿಯನ್ನು ವಾಪಸ್ಸು ನೀಡಲು ನಿರ್ದೇಶಿಸಿದ್ದಾರೆ. ಖರೀದಿದಾರರು, ಸದರಿ ಆದೇಶವನ್ನು ಜಿಲ್ಲಾಧಿಕಾರಿಗಳ ಮುಂದೆ ಟೀಕಿಸಿದ್ದಾರೆ. ಜಿಲ್ಲಾಧಿಕಾರಿಗಳು, ದಿನಾಂಕ:15.10.2001ರ ಆದೇಶದ ಮೂಲಕ, ಈ ಅಪೀಲನ್ನು ಪುರಸ್ಕರಿಸಿದ್ದಾರೆ ಮತ್ತು ಉಪ-ವಿಭಾಗಾಧಿಕಾರಿಯವರು ಮಾಡಿದ ಆದೇಶವನ್ನು ರದ್ದುಪಡಿಸಿದ್ದಾರೆ. ಆ ಕಾರಣದಿಂದಾಗಿ, ಮಂಜೂರಾತಿ ಪಡೆದವರು, ರಿಟ್ ಅಪೀಲು ಸಂಖ್ಯೆ: 7988/ 2002ನ್ನು ದಾಖಲಿಸಿ, ಜಿಲ್ಲಾಧಿಕಾರಿಗಳು ಮಾಡಿದ ದಿನಾಂಕ: 17.11.2004ರ ಆದೇಶವನ್ನು ಟೀಕಿಸಿದ್ದಾರೆ. ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ, ಉಪ-ವಿಭಾಗಾಧಿಕಾರಿಯವರು ಮಾಡಿದ ದಿನಾಂಕ: 26.09.2000ರ ಆದೇಶವು ನ್ಯಾಯಸಮ್ಮತವಾಗಿದೆಯೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಆ ಆದೇಶವನ್ನು ಪುನಃಸ್ಥಾಪಿಸುವ ಮೂಲಕ, ಜಿಲ್ಲಾಧಿಕಾರಿಗಳು ಮಾಡಿದ ದಿನಾಂಕ: 15.10.2001ರ ಆದೇಶವನ್ನು ರದ್ದುಪಡಿಸಿದ್ದಾರೆ.

6. ಖರೀದಿದಾರರು, ರಿಟ್ ಅಪೀಲು ಸಂಖ್ಯೆ: 55/2005ನ್ನು ದಾಖಲು ಮಾಡಿ, ಮಾನ್ಯ ಏಕಪೀಠ ನ್ಯಾಯಾಧೀಶರು ಮಾಡಿದ ದಿನಾಂಕ: 17.11.2004ರ ಆದೇಶವನ್ನು ಪ್ರಶ್ನಿಸಿದ್ದಾರೆ. ಆದಾಗ್ಯೂ, ರಿಟ್ ಅಪೀಲು ಇತ್ಯರ್ಥದಲ್ಲಿದ್ದ ಅವಧಿಯಲ್ಲಿ ಒಂದು ಮೆಮೋ ದಾಖಲೆಯನ್ನು ಸಲ್ಲಿಸಲಾಗಿದ್ದು, ದಿನಾಂಕ: 14.11.2005ರಂದು ರಿಟ್ ಅಪೀಲನ್ನು ಹಿಂತೆಗೆದುಕೊಳ್ಳಲಾಗಿದೆ. ತರುವಾಯದಲ್ಲಿ, ಅದಕ್ಕೆ ಸಂಬಂಧಿಸಿದಂತೆ, ಮೂಲ ದಾಖಲೆಗಳಿಂದ ತಿಳಿದುಬರುವಂತೆ, ಮೊದಲ ನೋಟಕ್ಕೆ ಕಂಡುಬರುವಂತೆ ಸ್ವತ್ತನ್ನು ಹರಾಜಿನ ಮೂಲಕ ಖರೀದಿಸಲಾಗಿದೆ ಮತ್ತು ಇದು, ಮಂಜೂರಾತಿ ಪಡೆದ ಭೂಮಿಯಲ್ಲವೆಂದು ಗುರುತಿಸಲಾಗಿದೆ ಎಂಬುದಾಗಿ, ದಿನಾಂಕ:

28.03.2014ರಂದು ಮತ್ತು ದಿನಾಂಕ: 28.03.2014ರಂದು ಸಹ ವಾಪಸ್ಸು ತರಿಸಿಕೊಳ್ಳುವುದಕ್ಕಾಗಿ/ ಪುನಃ ಪ್ರಾರಂಭಿಸುವುದಕ್ಕಾಗಿ, ಏಕಕಾಲಿಕವಾಗಿ ಅರ್ಜಿಗಳನ್ನು ಸಲ್ಲಿಸಿಸುವಲ್ಲಿ ಉಂಟಾದ 3300 ದಿನಗಳಿಗಿಂತ ಹೆಚ್ಚು ದೀರ್ಘಕಾಲದ ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಸಹ ಅರ್ಜಿಯನ್ನು ಸಲ್ಲಿಸಲಾಗಿದೆ.

7. ಪ್ರತ್ಯರ್ಜಿದಾರರು, ವಾದಗಳನ್ನು ವಾಪಸ್ಸು ಪಡೆದುಕೊಳ್ಳಲು/ ಪುನಃ ಪ್ರಾರಂಭಿಸಲು ಪುನರವಲೋಕನ ಅರ್ಜಿಯಲ್ಲಿ ಹಾಗೂ ಅರ್ಜಿಯಲ್ಲಿ ಮನವಿ ಮಾಡಿರುವುದಕ್ಕೆ ತಮ್ಮ ವಿವರವಾದ ಆಕ್ಷೇಪಣೆಯನ್ನು ದಾಖಲು ಮಾಡಿದ್ದಾರೆ. ಗುಣಾವಗುಣಗಳ ಆಧಾರದ ಮೇಲೆ ವಾದಿಸಿದ್ದಲ್ಲದೇ, ದಸ್ತಾವೇಜನ್ನು ಅವಲಂಬಿಸಿ ಪುನಃ ತರಿಸಿಕೊಳ್ಳಲು ಕೋರಿದ ಉದ್ದೇಶವು, ಪ್ರಾರಂಭಿಕ ಆಕ್ಷೇಪಣೆಯಲ್ಲಿ ಪುನರವಲೋಕನ ಅರ್ಜಿ ಮತ್ತು ರಿಟ್ ಅರ್ಜಿಯಲ್ಲಿರುವ ಅರ್ಜಿಗಳು ಊರ್ಜಿತ ಯೋಗ್ಯವಾಗಿಲ್ಲವೆಂದು ವಾದಿಸಿರುವುದರಿಂದ ಪರಿಸ್ಥಿತಿಯನ್ನು ಮಾರ್ಪಡಿಸುವುದಿಲ್ಲ ಮತ್ತು ವಿಳಂಬವನ್ನು ಮನ್ನಾ ಮಾಡಲು ಕೋರಿ ಮಂಡಿಸಿದ ವಿವರವನ್ನು ಸಮರ್ಥಿಸಿಕೊಳ್ಳುವುದಿಲ್ಲ; ಈ ಸಂಬಂಧದಲ್ಲಿ ಆಕ್ಷೇಪಣಾ ಹೇಳಿಕೆಯಲ್ಲಿ ಪ್ರಾರಂಭಿಕ ಆಕ್ಷೇಪಣೆಗಳನ್ನು ಎತ್ತಲಾಗಿದೆ; ದಿನಾಂಕ: 17.11.2004ರ ಆದೇಶವನ್ನು, ರಿಟ್ ಅಪೀಲು ಸಂಖ್ಯೆ: 55/2005 ರಲ್ಲಿರುವಂತೆ ಪ್ರಶ್ನಿಸಲಾಗಿದೆ ಎಂದು ವಾದಿಸಲಾಗಿದೆ. ಯಾವ ಅಪೀಲನ್ನು ಅಂಗೀಕರಿಸಲಾಗಿತ್ತೊ ಮತ್ತು ಇತ್ಯರ್ಥಕ್ಕಾಗಿ ಪರಿಗಣಿಸಲಾಗಿತ್ತೋ, ಆ ಹಂತದಲ್ಲೇ ಅದನ್ನು ಬೇಷರತ್ತಾಗಿ ಹಿಂತೆಗೆದುಕೊಳ್ಳಲಾಗಿದೆ ಮತ್ತು ಹಾಗಾಗಿ, ಮಾನ್ಯ ಏಕ ಪೀಠ ನ್ಯಾಯಾಧೀಶರ ಆದೇಶವನ್ನು ವಿಲೀನಗೊಳಿಸಿರುವುದರಿಂದ ಅದು, ಪುನರವಲೋಕನಕ್ಕೆ ಅಥವಾ ವಾಪಸ್ಸು ತರಿಸಿಕೊಳ್ಳಲು ಲಭ್ಯವಿರುವುದಿಲ್ಲ.

8. ಖರೀದಿದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಜಯಕುಮಾರ್ ಎಸ್. ಪಾಟೀಲ್, ಮಂಜೂರಾತಿ ಪಡೆದವರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಟಿ. ಶೇಷಗಿರಿರಾವ್, ಅಧಿಕಾರಿ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಸರ್ಕಾರಿ ವಕೀಲರಾದ ಶ್ರೀ ದಿಲ್‌ದಾರ್ ಶಿರಹಳ್ಳಿ

ಇವರುಗಳ ಅಹವಾಲನ್ನು ಆಲಿಸಲಾಗಿದೆ ಮತ್ತು ಮಾನ್ಯ ಸರ್ಕಾರಿ ವಕೀಲರು ಒದಗಿಸಿದ ದಾಖಲೆಗಳು ಸೇರಿದಂತೆ ಅರ್ಜಿಯ ಕಾಗದಪತ್ರಗಳನ್ನು ಪರಿಶೀಲಿಸಲಾಗಿದೆ.

9. ರಿಟ್ ಅಪೀಲು ಸಂಖ್ಯೆ: 7988/2002ರಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಮಾಡಿದ ಆದೇಶವು, ಲಭ್ಯವಿರುವ ದಾಖಲೆಗಳನ್ನು, ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಎಂಬುದನ್ನು ಸೂಚಿಸುತ್ತದೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಪ್ರಶ್ನಿತ ಜಮೀನು 1938ನೇ ವರ್ಷದಲ್ಲಿ ಮಂಜೂರು ಆಗಿತ್ತೆಂಬ ವಾದವನ್ನು ಅಂಗೀಕರಿಸಲಾಗಿತ್ತು ಮತ್ತು 1951ನೇ ವರ್ಷದಲ್ಲಿ ಪರಭಾರೆಯನ್ನು, ಮಾಡಲಾಗಿದೆ. ಪಿಟಿಸಿಎಲ್ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಲಾಗಿದೆಯೆಂಬ ನಿರ್ಣಯಕ್ಕೆ ಬರಲಾಗಿತ್ತು. ಪ್ರಸ್ತುತ ಪುನರವಲೋಕನ ಅರ್ಜಿ ಮೂಲಕ ಮತ್ತು ಅರ್ಜಿಯ ಮೂಲಕ ಅವರು, ಪುನರವಲೋಕನ ಅರ್ಜಿಯ ಅನುಬಂಧಗಳು–'ಎ'ಯಿಂದ 'ಡಿ'ಯಲ್ಲಿರುವಂತೆ ಪ್ರಶ್ನಿತ ಜಮೀನು ದರಖಾಸ್ತು ರಿಜಿಸ್ಟರ್ ಸಂಖ್ಯೆ: 17/1937–38 ಮತ್ತು ಭೂಮಿಗಳ ಸೂಚಿಯಲ್ಲಿರುವಂತೆ ಹರಾಜಿನ ಮೂಲಕ ಪಡೆದುಕೊಂಡದ್ದೆಂದು ನಿರೂಪಿಸಲು, ತದನಂತರದಲ್ಲಿ ಪಡೆದುಕೊಳ್ಳಲು ಮತ್ತು ಹಾಜರುಪಡಿಸಲು ಸಮರ್ಥರಾದೆವೆಂದು ವಾದಿಸಿದ್ದಾರೆ. ಆ ದೃಷ್ಟಿಯಿಂದ, ಮಂಜೂರಾತಿದಾರರು, ರಿಟ್ ಅರ್ಜಿಯಲ್ಲಿ ಈ ನ್ಯಾಯಾಲಯದ ಮುಂದೆ ಸಹ ಸಕ್ಷಮ ಅಧಿಕಾರಿಗಳ ಮುಂದೆ ವ್ಯವಹರಣೆಗಳಲ್ಲಿರುವ ಸದರಿ ದಸ್ತಾವೇಜುಗಳನ್ನು ಹಾಜರುಪಡಿಸದೆ ಮತ್ತು ಈ ನ್ಯಾಯಾಲಯಕ್ಕೆ ಮೋಸ ಎಸಗುವ ಮೂಲಕ ತಮ್ಮ ಹೆಸರಿನಲ್ಲಿ ಆದೇಶ ಪಡೆದುಕೊಂಡಿದ್ದಾರೆ ಎಂದು ವಾದಿಸಿದ್ದಾರೆ. ಆ ಹಿನ್ನಲೆಯಲ್ಲಿ, ಆದೇಶವು ಪುನರ್‌ಲೋಕಿಸಿಲು ಮತ್ತು ಸದರಿ ದಸ್ತಾವೇಜುಗಳನ್ನು ಪರಿಗಣನೆಗೆ ತೆಗೆದುಕೊಂಡು ಮೇಲೆ ವಿಪರ್ಯಯಗೊಳಿಸಲು ಗುರಿಯಾಗುತ್ತದೆ ಎಂದು ವಾದಿಸಿದ್ದಾರೆ.

10. ಖರೀದಿದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ಮೋಸಕ್ಕೆ ಸಂಬಂಧಿಸಿದಂತೆ ಅವರು ಮಂಡಿಸಿದ ವಾದಕ್ಕೆ

ಪೂರಕವಾಗಿ ಮತ್ತು ಅದರ ಪರಿಣಾಮಗಳ ಬಗ್ಗೆ, ಈ ಮುಂದಿನ ತೀರ್ಮಾನಗಳನ್ನು ಅವಲಂಬಿಸಿದ್ದಾರೆ:

i) ***ಇಂಡಿಯನ್ ಬ್ಯಾಂಕ್ –ವಿರುದ್ಧ– ಮೆ|| ಸತ್ಯಮ್ ಫೈಬರ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್***[1], ಮೊಕದ್ದಮೆಯಲ್ಲಿ, ನ್ಯಾಯಾಲಯದ ಅಂತರ್ನಿಹಿತ ಅಧಿಕಾರವನ್ನು, ಕ್ರಮಬದ್ಧ ಆಡಳಿತಕ್ಕಾಗಿ ಉಪಯೋಗಿಸಿಕೊಳ್ಳಲಾಗಿದೆಯೆಂದು ನಿರ್ಣಯಿಸಲಾಗಿದೆ. ಮೋಸದ ಕೃತ್ಯವು, ನ್ಯಾಯಾಲಯದ ವ್ಯವಹರಣೆಗಳ ಸತ್ಯನಿಷ್ಠತೆ, ನಿಯತತೆ ಮತ್ತು ಕ್ರಮಬದ್ಧತೆಯ ಮೇಲೆ ಪರಿಣಾಮವನ್ನುಂಟು ಮಾಡುವುದರಿಂದ ಆ ನ್ಯಾಯಾಲಯದಿಂದ ಮೋಸದಿಂದ ಪಡೆದುಕೊಂಡ ಆದೇಶವನ್ನು ರದ್ದುಪಡಿಸುವ ಅಂತರ್ನಿಹಿತ ಅಧಿಕಾರವನ್ನು ನ್ಯಾಯಾಲಯಗಳು ಹೊಂದಿವೆ. ಹಾಗೆಯೇ, ನ್ಯಾಯಾಲಯವನ್ನು ಪಕ್ಷಕಾರರು ತಪ್ಪುದಾರಿಗೆಳೆದಲ್ಲಿ ಅಥವಾ ನ್ಯಾಯಾಲಯವೇ ಪಕ್ಷಕಾರನಿಗೆ ಬಾಧಕವಾಗುವ ತಪ್ಪನ್ನು ಎಸಗಿದ್ದಲ್ಲಿ, ನ್ಯಾಯಾಲಯವು, ಅದರ ಆದೇಶವನ್ನು ವಾಪಸ್ಸು ಪಡೆಯುವ ಅಂತರ್ನಿಹಿತ ಅಧಿಕಾರವನ್ನು ಹೊಂದಿರುತ್ತದೆ.

ii) ***ಯುನೈಟೆಡ್ ಇಂಡಿಯಾ ಇನ್‌ಶ್ಯೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ರಾಜೇಂದ್ರ ಸಿಂಗ್ ಮತ್ತು ಇತರರು***[2] ಮೊಕದ್ದಮೆಯಲ್ಲಿ, ಪರಿಹಾರಕ್ಕಾಗಿ ಕ್ಲೇಮನ್ನು ಪಡೆದುಕೊಳ್ಳುವ ದುರುದ್ದೇಶದೊಂದಿಗೆ ಮಾಡಿದ ಯಾವುದೇ ಸಂಶಯಾಸ್ಪದ ಸೃಜನೆಯ ಬಗ್ಗೆ ಪಕ್ಷಕಾರನಿಗೆ ತಿಳಿದುಬಂದರೆ ಮತ್ತು ಅಂಥ ಸಮಯದಲ್ಲಿ ಪರಿಮಿತಿ ಮುಕ್ತಾಯವಾಗಿದ್ದರೆ, ಹೆಚ್ಚಿನ ಪ್ರಮಾಣದ ಮೋಸಕ್ಕೆ ಕಾರಣವಾಗಬಹುದಾದ ಹೊಸದಾಗಿ ಕಂಡುಬಂದ ಸಂಗತಿಗಳ ಆಧಾರದ ಮೇಲೆ ಆದೇಶವನ್ನು ಹಿಂಪಡೆಯುವುದಕ್ಕೆ ಮುಂದಾಗುವ ಪರಿಹಾರವನ್ನು ಅಂಥ ಸನ್ನಿವೇಶದಲ್ಲಿ ಮುಂಚಿತವಾಗಿ ಮುಕ್ತಾಯಗೊಳಿಸಲಾಗದು ಎಂದು ನಿರ್ಣಯಿಸಲಾಗಿದೆ. ಯಾವುದೇ ನ್ಯಾಯಾಲಯವು ಅಥವಾ ನ್ಯಾಯಾಧಿಕರಣವು, ಆ ಆದೇಶವು, ಕ್ಲೇಮು ಮಾಡಲಾಗಿರುವ

1. ಎಐಆರ್ 1996 ಎಸ್‌ಸಿ 2592 2. ಎಐಆರ್ 2000 ಎಸ್‌ಸಿ 1165

ಮೂಲ ಆಧಾರವನ್ನೇ ಪರಿಣಮಿಸುವಂತೆ, ಅಂಥ ಆಯಾಮವುಳ್ಳ ಮೋಸ ಅಥವಾ ತಪ್ಪು ನಿರೂಪಣೆಯ ಮೂಲಕ ವಾಗ್ದಾದಕ್ಕೊಳಗಾಗಿದೆಯೆಂದು ಅದಕ್ಕೆ ಮನದಟ್ಟಾದರೆ, ತನ್ನದೇ ಆದೇಶವನ್ನು ಪುನಃ ಹಿಂಪಡೆಯುವುದಕ್ಕೆ ಸಂಬಂಧಪಟ್ಟಂತೆ ಅಧಿಕಾರರಹಿತವಾಗಿದೆ ಎಂದು ಪರಿಗಣಿಸಲಾಗುವುದಿಲ್ಲ.

iii) ***ಎಸ್.ಪಿ. ಚೆಂಗಲರಾಯ ನಾಯ್ಡು ಅವರ ಕಾನೂನು ವಾರಸುದಾರರು –ವಿರುದ್ಧ– ಜಗನ್ನಾಥ ಅವರ ಕಾನೂನು ವಾರಸುದಾರರು ಮತ್ತು ಇತರರು***[3], ಮೊಕದ್ದಮೆಯಲ್ಲಿ, ಈ ನ್ಯಾಯಾಲಯಕ್ಕೆ ಮೋಸ ಎಸಗುವ ಮೂಲಕ ಪಡೆದುಕೊಂಡ ತೀರ್ಪು ಅಥವಾ ಡಿಕ್ರಿಯು, ಕಾನೂನಿನ ದೃಷ್ಟಿಯಿಂದ ಶೂನ್ಯ ಮತ್ತು ಅಕೃತವಾಗಿದೆಯೆಂದು ನಿರ್ಣಯಿಸಲಾಗಿದೆ. ಅದನ್ನು ಭಾಗಶಃ ವ್ಯವಹರಣೆಗಳಲ್ಲಿಯೂ ಸಹ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾಗಿದೆ. 'ವ್ಯಾಜ್ಯದ ದಂಡನೆ' ತತ್ವವನ್ನು, ಅದು ಮೋಸದ ಸಾಧನವಾಗಿದೆಂಬುದರಿಂದ ಅಸಂಬದ್ಧತೆಯಷ್ಟರಮಟ್ಟಿಗೆ ಒತ್ತಾಯಿಸಲಾಗದು. ಇನ್ನೊಂದು ಕಡೆಯಿಂದ ಅನುಕೂಲವನ್ನು ಪಡೆದುಕೊಳ್ಳುವ ಸಲುವಾಗಿ, ಮಹತ್ವದ ದಾಖಲೆಯನ್ನು ಕಕ್ಷಿದಾರನು ಹಿಡಿದಿಟ್ಟುಕೊಂಡರೆ, ಆಗ ಆತನು, ನ್ಯಾಯಾಲಯಲ್ಲಷ್ಟೇ ಅಲ್ಲದೆ, ವಿರೋಧಿ ಪಕ್ಷಕಾರನಿಗೆ ಸಹ ಮೋಸ ಎಸಗಿದ ತಪ್ಪಿತಸ್ಥನಾಗುತ್ತಾನೆ.

iv) ***ಎಮ್‌ಸಿಡಿ –ವಿರುದ್ಧ– ದೆಹಲಿ ರಾಜ್ಯ ಮತ್ತು ಇನ್ನೊಬ್ಬರು***[4], ಮೊಕದ್ದಮೆಯಲ್ಲಿ, ಅನುಕೂಲ ಮಾಡಿಕೊಳ್ಳುವ ದೃಷ್ಟಿಯಿಂದ ಮಹತ್ವದ ದಾಖಲೆಯನ್ನು ಹಿಡಿದಿಟ್ಟುಕೊಂಡರೆ, ಕಕ್ಷಿದಾರನು ನ್ಯಾಯಾಲಯಕ್ಕಷ್ಟೇ ಅಲ್ಲದೆ, ವಿರೋಧಿ ಪಕ್ಷಕಾರನಿಗೆ ಸಹ ಮೋಸ ಎಸಗಿದ ತಪ್ಪಿತಸ್ಥನಾಗುವನು ಎಂದು ನಿರ್ಣಯಿಸಲಾಗಿದೆ. ಹಾಗಾಗಿ, ಯಾವ ವ್ಯಕ್ತಿಯ ಮೊಕದ್ದಮೆಯು ಸುಳ್ಳನ್ನು ಆಧರಿಸಿರುವುದೋ, ಆ ವ್ಯಕ್ತಿಯು ಹೂಡಿದ ವ್ಯಾಜ್ಯ ವ್ಯವಹರಣೆಯನ್ನು ಯಾವುದೇ ಹಂತದಲ್ಲಾದರೂ ಕ್ಷಿಪ್ರವಾಗಿ ಕೈಬಿಡಬಹುದಾಗಿದೆ.

3. ಎಐಆರ್ 1994 ಎಸ್‌ಸಿ 853

4. (2005) 4 ಎಸ್‌ಸಿಸಿ 605

v) ***ಟಿ. ವಿಜೀಂದ್ರದಾಸ್ ಮತ್ತು ಇನ್ನೊಬ್ಬರು –ವಿರುದ್ಧ– ಎಂ. ಸುಬ್ರಮಣಿಯನ್ ಮತ್ತು ಇತರರು*[5]**, ಮೊಕದ್ದಮೆಯಲ್ಲಿ, ನ್ಯಾಯಾಲಯಕ್ಕೆ ಮೋಸವನ್ನು ಎಸಗಿದ್ದರೆ ಅದನ್ನು ಶೂನ್ಯಗೊಳಿಸಲಾಗುತ್ತದೆ ಮತ್ತು ಅಂಥ ಮೊಕದ್ದಮೆಯಲ್ಲಿ ಸಹಜ ನ್ಯಾಯ ತತ್ವಗಳನ್ನು ಸಹ ಪಾಲಿಸಬೇಕಾದ ಅಗತ್ಯವಿರುವುದಿಲ್ಲ ಹಾಗೂ ಅದರಡಿಯಲ್ಲಿ ಫಲಾನುಭವಿಯಾಗಿರುವ ಪಕ್ಷಕಾರನಿಗೆ ಪ್ರಯೋಜನ ನೀಡುವುದು ಸಂಪೂರ್ಣವಾಗಿ ನ್ಯಾಯಸಮ್ಮತವಲ್ಲವೆಂದು ನಿರ್ಣಯಿಸಲಾಗಿದೆ.

11. ಅಂಥ ಸನ್ನಿವೇಶದಲ್ಲಿ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಾಗಲಿ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XLVIIರ ನಿಯಮ 1ರ ಅಡಿಯಲ್ಲಾಗಲಿ, ಅಂಥ ಆದೇಶವನ್ನು ಪುನರ್‌ಪರಿಶೀಲಿಸುವ ಅಥವಾ ಹಿಂಪಡೆಯುವ ಅಧಿಕಾರವನ್ನು ಈ ನ್ಯಾಯಾಲಯವು ಹೊಂದಿದೆಯೇ ಎಂಬ ಸಂಗತಿಯ ಬಗ್ಗೆ, ಖರೀದಿದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ತೀರ್ಮಾನಗಳನ್ನು ಉದ್ಧರಿಸಿರುವರಾದರೂ, ರಿಟ್ ಅರ್ಜಿ ಸಂಖ್ಯೆ: 1845/1990ರಿಂದ ಉದ್ಭವಿಸಿದ ಪುನರವಲೋಕನ ಅರ್ಜಿ ಸಂಖ್ಯೆ: 1275/2014ರಲ್ಲಿ, ಪುನರವಲೋಕನಾ ಅರ್ಜಿಯನ್ನು ಪರಿಗಣಿಸುವಾಗ, ನಾನು, ಅಂತಹುದೇ ತೀರ್ಮಾನಗಳನ್ನು ಉಲ್ಲೇಖಿಸಿರುವ ಸಂದರ್ಭವನ್ನು ಹೊಂದಿದ್ದರಿಂದಾಗಿ, ಈ ಅರ್ಜಿಯಲ್ಲಿರುವ ಅಂಶಗಳನ್ನು ಕುರಿತು ಪ್ರತಿಯೊಂದು ನಿರ್ಣಯವನ್ನು ಉಲ್ಲೇಖಿಸುವುದು ಮತ್ತು ನಿರ್ಣಯಕ್ಕೆ ಬರುವುದು ಅಗತ್ಯವೆಂದು ನನಗೆ ಕಂಡುಬಂದಿಲ್ಲ. ದಿನಾಂಕ: 17.10.2016ರ ಆದೇಶದ ಮೂಲಕ, ಅಂಥ ಅಧಿಕಾರವು, ನಿರ್ದಿಷ್ಟ ಮೊಕದ್ದಮೆಯಲ್ಲಿನ ಸನ್ನಿವೇಶವು ಅದನ್ನು ಸಮರ್ಥಿಸಿದರೆ, ಪುನರವಲೋಕನ ಮಾಡುವ ಅಧಿಕಾರವನ್ನು ಚಲಾಯಿಸಲು, ಈ ನ್ಯಾಯಾಲಯಕ್ಕೆ ಲಭ್ಯವಾಗುತ್ತದೆ ಎಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ. ಸದರಿ ಸ್ಥಿತಿಯನ್ನು ಪುನರುಚ್ಚರಿಸುವಾಗ, ರಿಟ್ ಅರ್ಜಿಯಲ್ಲಿರುವ ಆದೇಶವನ್ನು ಪಡೆದುಕೊಂಡ ಮಂಜೂರಾತಿ ಪಡೆದವರು ಮಾಡಿದ ಮೋಸದ ವಾದಕ್ಕೆ ಸಂಬಂಧಿಸಿದಂತೆ ಮೇಲೆ ಹೇಳಲಾದ ತೀರ್ಮಾನುಗಳನ್ನು ಗಮನದಲ್ಲಿರಿಸಿಕೊಂಡಾಗ್ಯೂ,

5. (2007) 8 ಎಸ್‌ಸಿಸಿ 751

ರಿಟ್ ಅಪೀಲನ್ನು ದಾಖಲು ಮಾಡಿರುವ ಖರೀದಿದಾರರು, ಇಲ್ಲಿನ ಸಂದರ್ಭದಲ್ಲಿ ಸ್ವಾತಂತ್ರ್ಯವನ್ನು ಮೀಸಲಿರಿಸದೆ ಅದನ್ನು ಬೇಷರತ್ತಾಗಿ ಹಿಂತೆಗೆದುಕೊಂಡಿರುವುರಾದರೂ, ಈ ನ್ಯಾಯಾಲಯವು ಈ ಪರಿಗಣನೆಯನ್ನು ಈ ಪುನರವಲೋಕನ ಅರ್ಜಿಯಲ್ಲಿ ಮಾಡಬೇಕೇ ಅಥವಾ ಹಿಂಪಡೆಯುವ ಅರ್ಜಿಯಲ್ಲಿ ಮಾಡಬೇಕೇ? ಎಂಬುದು ಇಲ್ಲಿ ಉದ್ಭವಿಸುವ ಮುಂದಿನ ಪ್ರಶ್ನೆಯಾಗಿದೆ.

12. ಈ ಅಂಶದ ಮೇಲೆ, ಮಂಜೂರಾತಿ ಪಡೆದವರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಆದೇಶವನ್ನು ಪಡೆದುಕೊಳ್ಳಲು ಮೋಸ ಮಾಡಲಾಗಿದೆಯೆಂಬ ಮೊದಲನೇ ಆಪಾದನೆಯು ಆಧಾರವಿಲ್ಲದೇ ಮಾಡಿದಂಥದೆಂದು ವಾದಿಸಿದ್ದಾರೆ. ಖರೀದಿದಾರರ ಪರ ಮಾಡಿದ ವಾದದ ಪ್ರಕಾರ ಸಹ, ದಾಖಲೆಯನ್ನು ತರುವಾಯದಲ್ಲಿ ಗುರುತಿಸಲಾಗಿದೆ. ಮಂಜೂರಾತಿ ಪಡೆದವರ ಮೊಕದ್ದಮೆಯು ಲಭ್ಯವಿರುವ ದಸ್ತಾವೇಜುಗಳನ್ನು ಆಧರಿಸಿರುವುದರಿಂದ, ನ್ಯಾಯಾಲಯದಿಂದ ಅದನ್ನು ಅಡಗಿಸುವ ಅಥವಾ ತಡೆಹಿಡಿಯುವ ಈ ಪ್ರಶ್ನೆಯು ಉದ್ಭವಿಸುವುದಿಲ್ಲ ಎಂಬುದರ ಕಡೆಗೆ ಗಮನ ಸೆಳೆದಿದ್ದಾರೆ. ವ್ಯವಹರಣೆಗಳನ್ನು ಪ್ರಾರಂಭಿಸಿರುವ ಮಂಜೂರಾತಿ ಪಡೆದವರು, ತರುವಾಯದ ಪೀಳಿಗೆಯವರಾಗಿದ್ದು, ಅವರಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಕ್ಲೇಮನ್ನು ಮಾಡಿದ್ದಾರೆ. ಇದಲ್ಲದೆ, ಸರ್ಕಾರಿ ಆದೇಶ ದಿನಾಂಕ: 13.12.1938 ಇದು, ಹರಾಜಿನ ಮೂಲಕ ಜಮೀನನ್ನು ಆ ದಿನಾಂಕದ ನಂತರ ಮಂಜೂರು ಮಾಡಲಾಗಿತ್ತೆಂದು ಸ್ಪಷ್ಟಪಡಿಸಿರುವುದರಿಂದ, ನಡೆಸಲಾದ ಹರಾಜಿನ ಬಗ್ಗೆ ದಾಖಲೆಗಳಲ್ಲಿರುವ ಸೂಚನೆಯು, ಈ ಸಂದರ್ಭದಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡುವುದಿಲ್ಲ ಎಂದು ಗಮನ ಸೆಳೆದಿದ್ದಾರೆ. ಪ್ರಸ್ತುತ ಮೊಕದ್ದಮೆಯಲ್ಲಿ, ದಿನಾಂಕ: 26.04.1938ರಂದು ಮಂಜೂರಾತಿಯನ್ನು ನೀಡಲಾಗಿದ್ದು, ಆ ತರುವಾಯ ಮಾತ್ರವೇ ಅದಕ್ಕೆ ರಿಯಾಯಿತಿ ನೀಡಲಾಗಿದೆ. ಹೀಗೆ ವಾದಿಸಿರುವ ಮಾನ್ಯ ನ್ಯಾಯವಾದಿಗಳು, ಅದು ಹಾಗಿದ್ದರೂ ಕೂಡ, ಖರೀದಿದಾರನು ರಿಟ್ ಅಪೀಲು ಸಂಖ್ಯೆ: 55/2005ರಲ್ಲಿ ಅಪೀಲನ್ನು ಸಲ್ಲಿಸಿದ್ದು, ಅದನ್ನು ಅಂಗೀಕರಿಸಿದ ಮತ್ತು ಮಧ್ಯಕಾಲೀನ ಆದೇಶವನ್ನು ನೀಡಿದ ಸಂಗತಿಗಳನ್ನು ಪರಿಗಣಿಸುವ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಆದ್ದರಿಂದ, ಇಲ್ಲಿ

ಹೊರಡಿಸಿದ ಆದೇಶವನ್ನು ರಿಟ್ ಅಪೀಲಿನಲ್ಲಿ ಹೊರಡಿಸಿದ ಆದೇಶದಲ್ಲಿ ವಿಲೀನಗೊಳಿಸಲಾಗಿದೆ ಮತ್ತು ಅದರಲ್ಲಿ ಸಲ್ಲಿಸಿದ ಅರ್ಜಿಯನ್ನು ಸಹ ತಳ್ಳಿಹಾಕಲಾಗಿದೆ.

13. ಮಂಜೂರಾತಿ ಪಡೆದವರ ಪರ ಮಾನ್ಯ ನ್ಯಾಯವಾದಿಗಳು, ಆ ಸಂಬಂಧದಲ್ಲಿ ಈ ಮುಂದಿನ ತೀರ್ಪುಗಳನ್ನು ಉಲ್ಲಂಘಿಸಿದ್ದಾರೆ:

*i)* ***ಕುಂಯಮ್ಮದ್ ಮತ್ತು ಇತರರು –ವಿರುದ್ಧ– ಕೇರಳ ರಾಜ್ಯ ಮತ್ತು ಇತರರು***[6], ಮೊಕದ್ದಮೆಯಲ್ಲಿ, ಸೂಚಿತ ಸಮಯದಲ್ಲಿ ಅದೇ ವಸ್ತುವಿಷಯವನ್ನು ನಿರ್ವಹಿಸುವ ಒಂದಕ್ಕಿಂತ ಹೆಚ್ಚು ಡಿಕ್ರಿ ಅಥವಾ ಕಾರ್ಯಾತ್ಮಕ ಆದೇಶಗಳು ಇರಲು ಸಾಧ್ಯವಿಲ್ಲವೆಂಬುದು ವಿಲೀನದ ತತ್ವಕ್ಕೆ ಮೂಲಾಧಾರವಾದ ತರ್ಕವಾಗಿದೆಯೆಂದು ಹೇಳಲಾಗಿದೆ. ಅಧೀನ ನ್ಯಾಯಾಲಯವು, ನ್ಯಾಯಾಧಿಕರಣವು ಅಥವಾ ಪ್ರಾಧಿಕಾರವು, ಡಿಕ್ರಿಯನ್ನು ಅಥವಾ ಆದೇಶವನ್ನು ಹೊರಡಿಸಿದಾಗ, ಅದು ಮೇಲಿನ ನ್ಯಾಯಾಲಯದ ಮುಂದೆ, ಕಾನೂನಿನ ಅಡಿಯಲ್ಲಿ ಲಭ್ಯವಿರುವ ಪರಿಹಾರಕ್ಕೆ ಒಳಪಟ್ಟಿರುತ್ತದೆ. ನಂತರ, ಪ್ರಶ್ನಿತ ಡಿಕ್ರಿ ಅಥವಾ ಆದೇಶವು ಪರಿಣಾಮಕಾರಿಯಾಗಿರುವುದು ಮತ್ತು ಬಂಧನಕಾರಿಯಾಗಿರುವುದು ಮುಂದುವರಿಯುತ್ತಾದರೂ, ಅದರ ಅಂತಿಮತೆಗೆ ವಿಚಾರಣೆಯು ಎಂದಿಗೂ ಅಡ್ಡಿಯುಂಟು ಮಾಡುವುದಿಲ್ಲ. ಮೇಲಿನ ನ್ಯಾಯಾಲಯವು, ಒಮ್ಮೆ ಅದರ ಮುಂದಿರುವ ವ್ಯಾಜ್ಯವನ್ನು ಅಪೀಲಿನ ಅಡಿಯಲ್ಲಿರುವ ಡಿಕ್ರಿಯನ್ನು ಅಥವಾ ಆದೇಶವನ್ನು ಶೂನ್ಯಗೊಳಿಸುವ ಮೂಲಕವಾಗಲಿ ಅಥವಾ ಹಾಗೆಯೇ ಸ್ಥಿರೀಕರಿಸುವ ಮೂಲಕವಾಗಲಿ ಯಾವುದಾದರೂ ಒಂದು ರೀತಿಯಲ್ಲಿ ವಿಲೆ ಮಾಡಿದರೆ, ಸರ್ವೋಚ್ಚ ನ್ಯಾಯಾಲಯದ, ನ್ಯಾಯಾಧಿಕರಣದ ಅಥವಾ ಪ್ರಾಧಿಕಾರದ ಡಿಕ್ರಿ ಅಥವಾ ಆದೇಶವು ಅಂತಿಮವಾಗಿರುತ್ತದೆ, ಬಂಧನಕಾರಿಯಾಗಿರುತ್ತದೆ ಮತ್ತು ಕಾರ್ಯಾಚರಣೆಯಲ್ಲಿರುವ ಡಿಕ್ರಿ ಅಥವಾ ಆದೇಶವಾಗಿರುತ್ತದೆ ಹಾಗೂ ಅದರಲ್ಲಿ ಅಧೀನ ನ್ಯಾಯಾಲಯದ ಡಿಕ್ರಿ ಅಥವಾ ಆದೇಶವು ವಿಲೀನಗೊಳ್ಳುತ್ತದೆ. ಆದಾಗ್ಯೂ,

6. ಎಐಆರ್ 2000 ಎಸ್‌ಸಿ 2587

ಮೇಲಿನ ನ್ಯಾಯಾಲಯವು, ಅದರ ಮುಂದೆ ಮಂಡಿಸಿರುವ ವಿಷಯವನ್ನು ವಿಪರ್ಯಯಗೊಳಿಸುವ, ಮಾರ್ಪಡಿಸುವ ಅಥವಾ ಸ್ಥಿರೀಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿ, ಸರ್ವೋಚ್ಚ ನ್ಯಾಯಾಲಯವು ಚಲಾಯಿಸಿದ ಈ ಅಧಿಕಾರ ವ್ಯಾಪ್ತಿಯನ್ನು, ಅಪೀಲು ಸಲ್ಲಿಸಲು ವಿಶೇಷ ಅನುಮತಿ ನೀಡುವ ಸಂಬಂಧದಲ್ಲಿನ ಅರ್ಜಿಯನ್ನು ಕುರಿತು ನಿರ್ಧರಿಸುವಾಗ, ಅದಕ್ಕೆ ವಿರುದ್ಧವಾಗಿ ಅಪೀಲಿಗೆ ಸಲ್ಲಿಸಲಾದ ಡಿಕ್ರಿಯನ್ನು ಅಥವಾ ಆದೇಶವನ್ನು ವಿಪರ್ಯಯಗೊಳಿಸಲು ಅಥವಾ ಮಾರ್ಪಾಡುಗೊಳಿಸಲು ಆಗುವುದಿಲ್ಲವಾದ್ದರಿಂದ ಮತ್ತು ವಿಪರ್ಯಯಗೊಳಿಸಿಲ್ಲವಾದ್ದರಿಂದ ಅಥವಾ ಮಾರ್ಪಾಡುಗೊಳಿಸಿಲ್ಲವಾದ್ದರಿಂದ, ಮತ್ತೊಂದು ದೃಷ್ಟಿಕೋನದಿಂದ ಅದನ್ನು ನೋಡಬಹುದಾಗಿದೆ. ಸರ್ವೋಚ್ಚ ನ್ಯಾಯಾಲಯದ ಮುಂದೆ ಏನನ್ನು ಪ್ರಶ್ನಿಸಲಾಗಿದೆಯೋ ಅದರ ಮೇಲೆ ಅಪೀಲಿಗೆ ವಿಶೇಷ ಅನುಮತಿ ನೀಡಿದ ನಂತರ ಮಾತ್ರವೇ, ತರುವಾಯದಲ್ಲಿ ಅದರ ಮೇಲೆ ಅಪೀಲು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಳ್ಳಬಹುದು. ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿರುವ ಆದೇಶವನ್ನು, ವಿಶೇಷ ಅನುಮತಿ ಅರ್ಜಿಯ ಹಂತದಲ್ಲಿ ವಿಪರ್ಯಯಗೊಳಿಸಬಹುದು ಅಥವಾ ಮಾರ್ಪಾಡುಗೊಳಿಸಬಹುದು, ಸಹಜವಾಗಿಯೇ ಆ ಆದೇಶವನ್ನು ಆ ಹಂತದಲ್ಲಿ ಸಹ ಸ್ಥಿರೀಕರಿಸಬಹುದು.

ii) ***ಭಕ್ತಿ ದೇವ್‌ರಾಜ್ (2) ಮತ್ತು ಇನ್ನೊಬ್ಬರು –ವಿರುದ್ಧ– ಸುಧೀರ್ ಕುಮಾರ್*** [7], ಮೊಕದ್ದಮೆಯಲ್ಲಿ, ವಿಶೇಷ ಅನುಮತಿ ಅರ್ಜಿಯನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ವಜಾಗೊಳಿಸುವಲ್ಲಿನ ಸನ್ನಿವೇಶವನ್ನು ಪರಿಗಣಿಸುವಾಗ ಮತ್ತು ಉಚ್ಚ ನ್ಯಾಯಾಲಯದ ಮುಂದೆ ಪರಿಶೀಲನಾ ಅರ್ಜಿಯ ನಿರ್ವಹಣೆಯ ಪ್ರಶ್ನೆಯನ್ನು ಪರಿಗಣಿಸಿದ ಸಂದರ್ಭದಲ್ಲಿ, ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸುವುದು, ಅದೇ ನ್ಯಾಯಾಲಯದ ಮುಂದೆ ಪರಿಶೀಲನಾ ಅರ್ಜಿಯನ್ನು ಸಲ್ಲಿಸಲು ತಡೆಯಾಗುವುದಿಲ್ಲ. ಸದರಿ ನಿರ್ಣಯಕ್ಕೆ ಬರುವಾಗ ಈ ನ್ಯಾಯಾಲಯವು, ***ಕುಂಯಮ್ಮದ್ ಮೊಕದ್ದಮೆಯಲ್ಲಿನ*** (ಮೇಲೆ ಹೇಳಲಾದ) ತೀರ್ಪನ್ನು ಸಹ ಗಮನಕ್ಕೆ

7. [2011) 8 ಎಸ್‌ಸಿಸಿ 679

ತೆಗೆದುಕೊಂಡಿದ್ದು, ಅದರಲ್ಲಿ, ಸಿಪಿಸಿಯ 1ನೇ ನಿಯಮದ XLVIIನೇ ಕ್ರಮಾದೇಶದಲ್ಲಿ ಇರುವಂತೆ ಯಾವುದೇ ಅಪೀಲನ್ನು ಹೂಡಲಾಗಿಲ್ಲ ಎಂಬ ಪದಗಳಿಗೆ, ವಿಶೇಷ ಅನುಮತಿಯನ್ನು ನೀಡದಿರುವ ಸಂದರ್ಭದಲ್ಲಿ ಎಂಬ ಅರ್ಥವೂ ಬರುತ್ತದೆ. ಅಲ್ಲಿಯವರೆಗೆ, ಸರ್ವೋಚ್ಚ ನ್ಯಾಯಾಲಯದ ಮುಂದೆ ಕಾನೂನಿನ ದೃಷ್ಟಿಯಲ್ಲಿ ಯಾವುದೇ ಅಪೀಲು ಇರಲಿಲ್ಲ. ಆದುದರಿಂದ, ವಿಶೇಷ ಅನುಮತಿಯನ್ನು ನೀಡುವುದಕ್ಕೆ ಮೊದಲು, ಉಚ್ಚ ನ್ಯಾಯಾಲಯದಲ್ಲಿ ಪರಿಶೀಲನಾ ಅರ್ಜಿಯನ್ನು ಹೂಡಬಹುದಾಗಿದೆಯೇ ಹೊರತು, ಅನುಮತಿ ನೀಡಿದ ನಂತರವಲ್ಲ. ಒಮ್ಮೆ ವಿಶೇಷ ಅನುಮತಿಯನ್ನು ನೀಡಿದಲ್ಲಿ, ಸಿಂಧುತ್ವವನ್ನು ಪರಿಗಣಿಸುವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು, ಸರ್ವೋಚ್ಚ ನ್ಯಾಯಾಲಯದಲ್ಲಿ ನಿಹಿತವಾಗುತ್ತದೆ ಮತ್ತು ಆ ತರುವಾಯ ವಿಶೇಷ ಅನುಮತಿ ನೀಡುವುದಕ್ಕೆ ಮೊದಲು, ಉಚ್ಚ ನ್ಯಾಯಾಲಯದಲ್ಲಿ ಅಂಥ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ ಹೊರತು, ಉಚ್ಚ ನ್ಯಾಯಾಲಯವು, ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸುವಂತಿಲ್ಲ.

iii) ***ಡಾ|| ಸುಬ್ರಮಣಿಯನ್ ಸ್ವಾಮಿ –ವಿರುದ್ಧ– ತಮಿಳುನಾಡು ರಾಜ್ಯ ಮತ್ತು ಇತರರು***[8] ಮೊಕದ್ದಮೆಯಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 1ನೇ ನಿಯಮದ XLVIIನೇ ಕ್ರಮಾದೇಶದ ವಿವರಣೆಯು, ನ್ಯಾಯಾಲಯದ ತೀರ್ಪಿಗೆ ಆಧಾರವಾಗಿರುವ ಕಾನೂನಿನ ಪ್ರಶ್ನೆಯನ್ನು ಕುರಿತ ನಿರ್ಣಯವು, ಯಾವುದೇ ಇತರ ಮೊಕದ್ದಮೆಯಲ್ಲಿ ಮೇಲಿನ ನ್ಯಾಯಾಲಯದ ತರುವಾಯದ ನಿರ್ಣಯದ ಮೂಲಕ ವಿಪರ್ಯಯಗೊಳಿಸಿದರೆ ಅಥವಾ ಮಾರ್ಪಾಟುಗೊಳಿಸಿದರೆ, ಅದು ಅಂಥ ತೀರ್ಪಿನ ಪರಿಶೀಲನೆಗೆ ಆಧಾರವಾಗಿರತಕ್ಕದ್ದಲ್ಲ ಎಂದು ಉಪಬಂಧಿಸಿದೆ ಎಂಬುದಾಗಿ ನಿರ್ಣಯಿಸಲಾಗಿದೆ. ಹಾಗಾಗಿ, ತಪ್ಪಾದ ನಿರ್ಣಯವು ಸಹ, ಪುನರವಲೋಕನ ಅರ್ಜಿಯನ್ನು ಪುರಸ್ಕರಿಸುವ ಮೊದಲ ಮತ್ತು ಅತೀ ಮುಖ್ಯ ಅಗತ್ಯತೆಯು, ಅದರ ಆದೇಶ ಕೋರಲಾದ ಪುನರ್‌ಪರಿಶೀಲನೆಯು, ಮೇಲ್ನೋಟದಿಂದಲೇ ಆದೇಶದ ಯಾವುದೇ ತಪ್ಪು ಗೋಚರವಾಗುವುದರಿಂದ ಮತ್ತು ತೀರ್ಪಿಗೆ/ ಆದೇಶಕ್ಕೆ ಅನ್ವಯಿಸಿದ

8. (2014) 5 ಎಸ್‌ಸಿಸಿ 75

ಯಾವುದೇ ಅಂಥ ತಪ್ಪು ಅಂತಿಮತೆಯ ಅಭಾವದಲ್ಲಿ ಬದಲಾಯಿಸಲಾಗುವುದಿಲ್ಲ ಎಂದಾಗುವುದರಿಂದ, ಪುನರ್‌ಪರಿಶೀಲನೆ ಕೈಗೊಳ್ಳಲು ನ್ಯಾಯಾಲಯಕ್ಕೆ ಅದು ಆಧಾರವಾಗುವುದಿಲ್ಲ.

14. ಆದಾಗ್ಯೂ, ಖರೀದಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಆದೇಶದ ವಿಲೀನಕ್ಕೆ ಸಂಬಂಧಿಸಿದ ಸಂಗತಿ ಕುರಿತ ಪ್ರತಿಕ್ರಿಯೆಯಲ್ಲಿ, ***ಗಂಗಾಧರ ಪಾಲೋ -ವಿರುದ್ಧ- ಕಂದಾಯ ವಿಭಾಗೀಯ ಅಧಿಕಾರಿ ಮತ್ತು ಇನ್ನೊಬ್ಬರು***[9], ಈ ಮೊಕದ್ದಮೆಯನ್ನವಲಂಬಿಸಿದ್ದಾರೆ. ಈ ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೆಲವು ಕಾರಣಗಳನ್ನು ನೀಡಿ, ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿದಾಗ, ವಿಲೀನ ಆದೇಶದಲ್ಲಿ ಏನೇ ಇರಲಿ, ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿ, ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ ಉಚ್ಚ ನ್ಯಾಯಾಲಯದ ತೀರ್ಪು ವಿಲೀನಗೊಳ್ಳುವುದು ಎಂದು ನಿರ್ಣಯಿಸಲಾಗಿದೆ. ಅಂಥ ಸನ್ನಿವೇಶದಲ್ಲಿ, ತೀರ್ಪಿನ ಪುನರ್‌ಪರಿಶೀಲನೆ ಇರಲು ಸಾಧ್ಯವಿಲ್ಲ. ಏಕೆಂದರೆ ಅದು ಅಸ್ತಿತ್ವದಲ್ಲೇ ಇರುವುದಿಲ್ಲ. ಆದರೆ, ಯಾವುದೇ ಕಾರಣಗಳನ್ನು ನೀಡದೆ ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿದಾಗ, ಸನ್ನಿವೇಶವು ಬೇರೆಯಾಗಿರುತ್ತದೆ; ಆಗ ತೀರ್ಪಿನ ವಿಲೀನ ಇರುವುದಿಲ್ಲ ಮತ್ತು ಪುನರ್‌ಪರಿಶೀಲನೆಯ ವ್ಯಾಪ್ತಿಯು, ದಾಖಲೆಯಲ್ಲಿ ಕಂಡುಬರುವ ತಪ್ಪುಗಳಿಗೆ ಸೀಮಿತವಾಗಿರುವುದರಿಂದ, ಉಚ್ಚ ನ್ಯಾಯಾಲಯದ ತೀರ್ಪು ಅಸ್ತಿತ್ವದಲ್ಲಿರುವುದರಿಂದ, ಅದನ್ನು ಪುನರ್‌ಪರಿಶೀಲಿಸಬಹುದಾಗಿದೆ.

15. ಇದಲ್ಲದೆ, ಮಾನ್ಯ ಹಿರಿಯ ನ್ಯಾಯವಾದಿಗಳು, ಸರ್ವೋಚ್ಚ ನ್ಯಾಯಾಲಯವು ವಿಶೇಷ ಅರ್ಜಿಯನ್ನು ವಿಲೇ ಮಾಡಿದಾಗ ವಿಲೀನವಿತ್ತೆಂದು ವಿವರಿಸಲು, ಮಂಜೂರಾತಿ ಪಡೆದವರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವ **ಕುಂಯ್ಯೆಮ್ಮದ್** (ಮೇಲೆ ಹೇಳಲಾದ) ಮೊಕದ್ದಮೆಯನ್ನು ಸಹ ಉಲ್ಲೇಖಿಸಿದ್ದಾರೆ. ಆದ್ದರಿಂದ,

9. (2011) 4 ಎಸ್‌ಸಿಸಿ 602

ಪ್ರಸ್ತುತ ಮೊಕದ್ದಮೆಯಲ್ಲಿ ರಿಟ್ ಅಪೀಲನ್ನು ಹಿಂತೆಗೆದುಕೊಂಡಿರುವುದರಿಂದ, ಆ ಕುರಿತು ಯಾವ ಆದೇಶವನ್ನು ಮಾಡಿಲ್ಲವೆಂದು; ಆದ್ದರಿಂದ, ವಿಲೀನವಿಲ್ಲವೆಂದು ಹಾಗೂ ಆದೇಶವು ಪುನರ್‌ಪರಿಶೀಲನೆಗೆ ಲಭ್ಯವಿಲ್ಲವೆಂದು ವಾದಿಸಿದ್ದಾರೆ.

16. ಮೇಲೆ ಹೇಳಲಾದ ನಿರ್ಣಯಗಳಿಂದ, ವಿಶೇಷ ಅನುಮತಿ ಅರ್ಜಿಯನ್ನು ಕಾರಣಗಳ ಸಹಿತ/ ಕಾರಣಗಳಿಲ್ಲದೆ ವಜಾಗೊಳಿಸಿದಾಗ ಅಥವಾ ಹಿಂತೆಗೆದುಕೊಂಡಾಗ, ಅದರ ಪರಿಣಾಮದಷ್ಟರಮಟ್ಟಿಗೆ ಕಾನೂನಿನ ನಿಲುವು, ಸ್ಪಷ್ಟವಾಗಿದೆ; ***ಕುಂಯಮ್ಮದ್*** ಮೊಕದ್ದಮೆಯಲ್ಲಿ ನಿರೂಪಿಸಿದಂತೆ, ವಿಶೇಷ ಅನುಮತಿಯನ್ನು ನೀಡುವವರೆಗಿನ ಸನ್ನಿವೇಶದಲ್ಲಿ, ಕಾನೂನಿನ ದೃಷ್ಟಿಯಲ್ಲಿ ಅಪೀಲು ಇರುವುದಿಲ್ಲ; ಹಾಗಾಗಿ, ವಿಲೀನವು ಇರುವುದಿಲ್ಲ ಎಂಬ ಭಿನ್ನ ನಿಲುವು ತಾಳಲಾಗಿದೆ. ಒಮ್ಮೆ ವಿಶೇಷ ಅನುಮತಿಯನ್ನು ನೀಡಿದರೆ, ಅದು ಅಪೀಲಿನಲ್ಲಿ ವಿಲೀನಗೊಳ್ಳುತ್ತದೆ ಮತ್ತು ಆ ತರುವಾಯ, ಉಚ್ಚ ನ್ಯಾಯಾಲಯದ ಆದೇಶವನ್ನು ಪರಿಗಣಿಸುವ ಅಧಿಕಾರವ್ಯಾಪ್ತಿಯು, ಸರ್ವೋಚ್ಚ ನ್ಯಾಯಾಲಯದಲ್ಲಿ ನಿಹಿತಗೊಳ್ಳುತ್ತದೆ ಎಂಬ ನಿಲುವನ್ನು ಸಹ ಸ್ಪಷ್ಟವಾಗಿ ಹೇಳಲಾಗಿದೆ. ವ್ಯಾಜ್ಯಕಾರನು, ಅಪೀಲಿನ ಪರಿಹಾರವನ್ನು ಹೊಂದಿದರೆ ಮತ್ತು ಅದನ್ನು ಪಡೆದರೆ, ಆ ಕ್ರಮವನ್ನು ಅದರ ತಾರ್ಕಿಕ ನಿರ್ಣಯಕ್ಕೆ ಅನುಸಾರವಾಗಿ ಮುಂದುವರೆಸಬೇಕಾಗುತ್ತದೆ ಎಂಬುದನ್ನು ಇದು ವಿಶದಪಡಿಸುತ್ತದೆ. ಪುನರವಲೋಕನ ಅರ್ಜಿಯನ್ನು ಸಲ್ಲಿಸುವುದು ಸೇರಿದಂತೆ, ಯಾವುದೇ ಉದ್ದೇಶಕ್ಕಾಗಿ ಇದನ್ನು ಹಿಂಪಡೆದುಕೊಂಡರೆ, ಅಂಥ ಇತರ ಪರಿಹಾರವನ್ನು ಪಡೆದುಕೊಳ್ಳಲು ನ್ಯಾಯಾಲಯದ ಅನುಮತಿಯೊಂದಿಗೆ ಅದನ್ನು ಮಾಡಬೇಕಾಗುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ. ಸದರಿ ವಿಶ್ಲೇಷಣೆಯಿಂದ, ಪ್ರಸ್ತುತ ಮೊಕದ್ದಮೆಯಲ್ಲಿ ಇರುವಂತೆ, ಉಚ್ಚ ನ್ಯಾಯಾಲಯದ ಅಧಿನಿಯಮದ 4ನೇ ಪ್ರಕರಣದ ಮೇರೆಗೆ, ಮಾನ್ಯ ವಿಭಾಗೀಯ ಪೀಠಕ್ಕೆ ಆಂತರಿಕ ನ್ಯಾಯಾಲಯ ಅಪೀಲು, ಶಾಸನಾತ್ಮಕ ಪರಿಹಾರವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದ್ದರಿಂದ, ಅಪೀಲನ್ನು ಅಂಗೀಕರಿಸಿದರೆ, ರಿಟ್ ಅರ್ಜಿಯಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶದ ಸಿಂಧುತ್ವವನ್ನು ಪರಿಗಣಿಸುವ ಅಧಿಕಾರವ್ಯಾಪ್ತಿಯು ವಿಭಾಗೀಯ ಪೀಠದಲ್ಲಿ ನಿಹಿತಗೊಳ್ಳುತ್ತದೆ.

17. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಸಂಗತಿಗಳಲ್ಲಿ ರಿಟ್ ಅರ್ಜಿ ಸಂಖ್ಯೆ: 7988/2002ರಲ್ಲಿ ಹೊರಡಿಸಿದ ದಿನಾಂಕ: 17.11.2004ರ ಆದೇಶದ ವಿರುದ್ಧ, ರಿಟ್ ಅಪೀಲನ್ನು ಹೂಡಲಾಗಿದೆ ಎಂಬುದು ಕಂಡುಬರುತ್ತದೆ. ಇದನ್ನೇ ನ್ಯಾಯಾಲಯದ ಮುಂದೆ ಪಟ್ಟಿ ಮಾಡಲಾಗಿದ್ದು, ದಿನಾಂಕ: 23.07.2005ರಂದು ಅಂಗೀಕರಿಸಲಾಗಿದೆ. ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶವನ್ನು ತಡೆಹಿಡಿದು, ಮಧ್ಯಂತರ ಆದೇಶವನ್ನು ಸಹ ನೀಡಲಾಗಿದೆ. ಪರಿಗಣನೆಗಾಗಿ ರಿಟ್ ಅಪೀಲಿನ ಇತ್ಯರ್ಥದ ಅವಧಿಯಲ್ಲಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ರಿಟ್ ಅಪೀಲನ್ನು ಹಿಂತೆಗೆದುಕೊಳ್ಳಲು ಕೋರಿ ವಿವರಣ ಪತ್ರ (ಮೆಮೋ) ಸಲ್ಲಿಸಿದ್ದಾರೆ. ಮಾನ್ಯ ವಿಭಾಗೀಯ ಪೀಠವು, ದಿನಾಂಕ: 14.11.2005ರಂದು ಈ ಮುಂದಿನ ಆದೇಶವನ್ನು ಹೊರಡಿಸಿದೆ;

> "ಆರ್. ಚಂದ್ರಣ್ಣ ಇವರು ಸಲ್ಲಿಸಿದ ವಿವರಣಪತ್ರವನ್ನು ದಾಖಲೆಗೆ ತೆಗೆದುಕೊಳ್ಳಲಾಗಿದೆ. ವಿವರಣಪತ್ರದ ದೃಷ್ಟಿಯಲ್ಲಿ ಮತ್ತು ವಿವರಣಪತ್ರದ ಪರಿಭಾಷೆಯಲ್ಲಿ, ಅಪೀಲನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ವಿಲೆ ಮಾಡಲಾಗಿದೆ, ತದನುಸಾರವಾಗಿ ಆದೇಶಿಸಲಾಗಿದೆ".

18. ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶವನ್ನು ಅನುಮೋದಿಸಿ ಅಥವಾ ಅನುಮೋದಿಸದೇ, ಹಾಗೆಂದು ಅಪೀಲಿನಲ್ಲಿ ಯಾವ ಆದೇಶವನ್ನು ಮಾಡಿಲ್ಲವೆಂಬುದು ಸತ್ಯ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದಾಗ್ಯೂ, ಶಾಸನಾತ್ಮಕ ಪರಿಹಾರವನ್ನು ಪಡೆದುಕೊಳ್ಳಲಾಗಿದೆ ಹಾಗೂ ಅಪೀಲನ್ನು ಸಹ ಪರಿಗಣನೆಗಾಗಿ ಅಂಗೀಕರಿಸಲಾಗಿದೆ. ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಪ್ರಶ್ನಿಸುವುದನ್ನು ಖರೀದಿದಾರರು ಬಿಟ್ಟುಕೊಟ್ಟಿದ್ದಾರೆ, ಹಾಗಾಗಿ, ರಿಟ್ ಅರ್ಜಿಯಲ್ಲಿ ಹೊರಡಿಸಿದ ದಿನಾಂಕ: 17.11.2004ರ ಆದೇಶದ ಸರಿತನವನ್ನು ಒಪ್ಪಿಕೊಂಡಿದ್ದಾರೆ. ಆ ಹಂತದಲ್ಲಿ ಪರಸ್ಪರ ತಿಳುವಳಿಕೆಗೆ ಬರಲಾಗಿತ್ತು ಮತ್ತು ಆ ಕಾರಣದಿಂದ ಅಪೀಲನ್ನು ಹಿಂತೆಗೆದುಕೊಳ್ಳಲಾಗಿತ್ತು. ಆದರೆ, ಮಂಜೂರಾತಿ ಪಡೆದವರು ನಿಬಂಧನೆಗೆ ನಿಷ್ಠರಾಗಿ

ಉಳಿಯಲಿಲ್ಲ ಮತ್ತು ಮುಂದಿನ ಪರಿಶೀಲನೆ ನಂತರ, ದಾಖಲೆಗಳನ್ನು ಪತ್ತೆ ಮಾಡಲಾಯಿತು ಮತ್ತು ಅವುಗಳನ್ನು ಪತ್ತೆ ಮಾಡಿದ ನಂತರ, ರಿಟ್ ಅರ್ಜಿಯಲ್ಲಿ ಮಂಜೂರಾತಿ ಪಡೆದವರ ಇಡೀ ಮೊಕದ್ದಮೆಯು ಸುಳ್ಳು ನಿರೂಪಣೆಯ ಮೇಲೆ ಆಧಾರಿತವಾಗಿತ್ತು; ಪರಿಗಣನೆಯನ್ನು ಮಾಡಬೇಕಾದ ಅಗತ್ಯವು ತರುವಾಯದ ದಸ್ತಾವೇಜಿನಲ್ಲಿ ಕಂಡುಬಂದದ್ದರಿಂದ, ಪುನರ್‌ಪರಿಶೀಲಿಸುವ ಮತ್ತು ಹಿಂಪಡೆಯುವ ಅಗತ್ಯದಿಂದ, ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶವು ಅವಶ್ಯವಾಗಿತ್ತು ಎಂಬುದಾಗಿ ಖರೀದಿದಾರರು ಪರ ವಾದ ಮಂಡಿಸಲಾಗಿದೆ.

19. ನಿಯತ ಕ್ರಮದಲ್ಲಿ ಅಂಥ ವಾದಕ್ಕೆ ಹೆಚ್ಚಿನ ಪರಿಗಣನೆಯ ಅಗತ್ಯವಿದೆ. ಆದಾಗ್ಯೂ, ಪ್ರಸ್ತುತ ಮೊಕದ್ದಮೆಯಲ್ಲಿ ಖರೀದಿದಾರರು, ಇದೇ ಕಾರಣವನ್ನು ಮುಂದಿಟ್ಟು, ಈ ಹಿಂದೆ ಹಿಂಪಡೆದಂಥ ಅಪೀಲನ್ನು ಪುನಃಸ್ಥಾಪಿಸಲು ಕೋರಿ ರಿಟ್ ಅಪೀಲು ಸಂಖ್ಯೆ: 55/2005ರಲ್ಲಿ, 2014ರ ಐ.ಎ. ಸಂಖ್ಯೆ: 1ರಿಂದ 4ರಲ್ಲಿ ಅಪೀಲು ಸಲ್ಲಿಸಿದ್ದಾರೆಂಬ ವಿಷಯ ಗಮನದಲ್ಲಿರಬೇಕು. ತರುವಾಯದಲ್ಲಿ ಪತ್ತೆ ಮಾಡಿದ ಖರೀದಿದಾರರ ಕ್ಲೇಮು ಅದೇ ಆಗಿದ್ದು, ಅರ್ಜಿಗಳಲ್ಲಿ ಅದನ್ನೇ ಅವಲಂಬಿಸಲಾಗಿದೆ. ಮಾನ್ಯ ವಿಭಾಗೀಯ ಪೀಠವು ಸದರಿ ಅರ್ಜಿಗಳನ್ನು ಪರಿಗಣನೆಗೆ ಕೈಗೆತ್ತಿಕೊಂಡು, ದಿನಾಂಕ: 11.3.2014ರಂದು ತಳ್ಳಿಹಾಕಿದ್ದಾರೆ. ಸದರಿ ಆದೇಶವನ್ನು ಈ ಕೆಳಗಿನಂತೆ ಓದಲಾಗಿದೆ:

***"ಐ.ಎ.ಸಂಖ್ಯೆ: I/14, II/14, III/14 & IV/14ರ ಮೇಲೆ ಹೊರಡಿಸಿದ ಆದೇಶ***

*ಅಪೀಲುದಾರರ ಪರ ನ್ಯಾಯವಾದಿಗಳು ವಿವರಣಪತ್ರವನ್ನು ಸಲ್ಲಿಸಿರುವುದನ್ನು ಅನುಸರಿಸಿ, ಅಪೀಲನ್ನು ವಜಾಗೊಳಿಸಲಾಗಿದೆ ಮತ್ತು ಹಿಂತೆಗೆದುಕೊಳ್ಳಲಾಗಿದೆ.*

*ಈಗ, ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸುವ ಮೂಲಕ ದಿನಾಂಕ: 14.11.2005ರಂದು ಆದೇಶವನ್ನು ಹಿಂಪಡೆದುಕೊಳ್ಳಲು*

*ಮತ್ತು ಮಧ್ಯಂತರ ಆದೇಶವನ್ನು ಹೊರಡಿಸಲು ಆ ಅರ್ಜಿಗಳನ್ನು ಸಲ್ಲಿಸಲಾಗಿದೆ.*

*ಅರ್ಜಿದಾರರ ಪರ ನ್ಯಾಯವಾದಿಗಳು ವಿವರಣಪತ್ರವನ್ನು ಸಲ್ಲಿಸಿದ್ದನ್ನು ಅನುಸರಿಸಿ, ಈ ನ್ಯಾಯಾಲಯವು, ಸದರಿ ಆದೇಶವನ್ನು ಹಿಂಪಡೆದುಕೊಳ್ಳಲು ಇರುವ ಯಾವುವೇ ಕಾರಣಗಳನ್ನು ಗಮನಿಸಿರುವುದಿಲ್ಲ.*

*ತದನುಸಾರ, ಈ ಮಧ್ಯಂತರ ಅಪೀಲು (ಐ.ಎ.)ಗಳನ್ನು ತಳ್ಳಿಹಾಕಲಾಗಿದೆ:"*

20. ಈ ನ್ಯಾಯಾಲಯದ ಮುಂದೆ ತರಬೇಕಾಗಿದ್ದ ಕೆಲವು ದಸ್ತಾವೇಜುಗಳನ್ನು ಕೋರಿದ ಅಂಥ ಸಂದರ್ಭದಲ್ಲಿ, ಅದೇ ವಸ್ತುವಿಷಯದ ಮತ್ತು ಅದೇ ದಸ್ತಾವೇಜುಗಳ ಸಂಬಂಧದಲ್ಲಿ ಸಹ, ಶ್ರೇಣಿ ವ್ಯವಸ್ಥೆಯಲ್ಲಿ ಅಪೀಲು ನ್ಯಾಯಾಲಯದ ಮುಂದೆ ಅವಲಂಬಿತವಾಗಿತ್ತು ಮತ್ತು ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸಿದ್ದನ್ನು ಗಮನಕ್ಕೆ ತೆಗೆದುಕೊಂಡ ನಂತರವೂ ಅಪೀಲು ನ್ಯಾಯಾಲಯವು, ವಿವರವಾದ ಪರಿಗಣನೆ ಇಲ್ಲದಿದ್ದಾಗ್ಯೂ, ದಸ್ತಾವೇಜುಗಳನ್ನು ಅವಲಂಬಿಸಿದ ಹಿನ್ನೆಲೆಯಲ್ಲಿನ ಗುಣಾರ್ಹತೆಗಳ ಮೇಲೆ ಆದೇಶವನ್ನು ಹಿಂಪಡೆದುಕೊಳ್ಳಲು ಮತ್ತು ಅಪೀಲನ್ನು ಪರಿಗಣಿಸಲು ನ್ಯಾಯಾಲಯಕ್ಕೆ ಯಾವುದೇ ಕಾರಣವು ಕಂಡುಬರುತ್ತಿಲ್ಲವೆಂದು ಅಭಿಪ್ರಾಯಪಟ್ಟಿದ್ದು, ಒಂದು ದಶಕಕ್ಕೂ ಹಿಂದೆ ಹೊರಡಿಸಿದ ಆದೇಶವನ್ನು ಪುನರ್‌ಪರಿಶೀಲಿಸುವುದನ್ನು ಪುರಸ್ಕರಿಸುವುದು ಅಥವಾ ಇತ್ಯರ್ಥವಾದ ನಿಲುವನ್ನು ಅಸ್ತವ್ಯಸ್ತಗೊಳಿಸಲು ಅರ್ಜಿಯನ್ನು ಪುನಃ ಕರೆಯುವುದು ಈ ನ್ಯಾಯಾಲಯಕ್ಕೆ ಸೂಕ್ತವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಂಥ ಸಂದರ್ಭದಲ್ಲಿ ವ್ಯಾಜ್ಯವನ್ನು ಅಂತಿಮಗೊಳಿಸುವುದನ್ನು ಪ್ರಮಾಣಕವೆಂದು ಪರಿಗಣಿಸಬೇಕಾಗುತ್ತದೆ. ಇಲ್ಲದೆ ಹೋದರೆ, ಮಾನ್ಯ ವಿಭಾಗೀಯ ಪೀಠವು ಪುನರವಲೋಕನ ಅರ್ಜಿಯನ್ನು ನಿರಾಕರಿಸಿದ ಹೊರತಾಗಿಯೂ, ಅದನ್ನು ಪರಿಗಣಿಸಿದರೆ, ಅದು ಒಂದು

ನ್ಯಾಯಾಲಯದಲ್ಲಿ ನೆಲೆ ನಿಲ್ಲದೆ, ನ್ಯಾಯಾಲಯದಿಂದ ನ್ಯಾಯಾಲಯಕ್ಕೆ ಅಲೆದಾಟದ ಸ್ವರೂಪ ತಾಳಬಹುದಾಗಿದ್ದು, ಇದನ್ನು ತಪ್ಪಿಸುವುದು ಅಪೇಕ್ಷಣೀಯವಾದುದಾಗಿದೆ. ಆದ್ದರಿಂದ ರಿಟ್ ಅರ್ಜಿ ಸಂಖ್ಯೆ: 7988/2002ರಲ್ಲಿ ಹೊರಡಿಸಿದ ದಿನಾಂಕ: 17.11.2004ರ ಆದೇಶವನ್ನು ಪುನರ್ ಪರಿಶೀಲಿಸಲು/ ಹಿಂಪಡೆಯಲು ಕೋರಿ ಒತ್ತಾಯಿಸಿದ ವಾದಗಳಲ್ಲಿ ನನಗೆ ಯಾವುದೇ ಗುಣಾರ್ಹತೆಯು ಕಂಡುಬರುತ್ತಿಲ್ಲ. ಅಂಥ ಸಂದರ್ಭದಲ್ಲಿ, ವಿಳಂಬವನ್ನು ಮನ್ನಿಸಲು ಕೋರಿ ಸಲ್ಲಿಸಿದ ಅರ್ಜಿಗಳಲ್ಲಿ ಮತ್ತು ಕಾನೂನು ಪ್ರತಿನಿಧಿಗಳು ದಾಖಲೆಗೆ ಬರುವುದನ್ನು ಕೋರಿರುವುದರಲ್ಲಿ ಸಹ ಗುಣಾರ್ಹ ಪರಿಗಣನೆ ಕಂಡುಬರುತ್ತಿಲ್ಲ.

21. ತದನುಸಾರ, ಈ ಮುಂದಿನಂತೆ ಆದೇಶಿಸಲಾಗಿದೆ:

**ಆಜ್ಞೆ**

i) ರಿಟ್ ಅಪೀಲು ಸಂಖ್ಯೆ: 7988/2002ರಲ್ಲಿ ಸಲ್ಲಿಸಿದ ಐ.ಎ. ಸಂಖ್ಯೆ: 1/2014, 3/2014, 4/2014, 5/2014, 6/2014, 7/2014, 8/2014 ಮತ್ತು 9/2014 ಇವುಗಳನ್ನು ವಜಾಗೊಳಿಸಲಾಗಿದೆ.

ii) ರಿಟ್ ಅಪೀಲು ಸಂಖ್ಯೆ: 248/2014ರಲ್ಲಿ ಸಲ್ಲಿಸಿದ ಐ.ಎ. ಸಂಖ್ಯೆ: 1/2014 ಮತ್ತು 2/2014 ಇವುಗಳನ್ನು ಸಹ ವಜಾಗೊಳಿಸಲಾಗಿದೆ.

iii) ತತ್ಪರಿಣಾಮವಾಗಿ, ಪುನರವಲೋಕನ ಅರ್ಜಿಯನ್ನು ವಜಾಗೊಳಿಸಲಾಗಿದೆ.

iv) ಪಕ್ಷಕಾರರು ಅವರವರ ವೆಚ್ಚಗಳನ್ನು ಅವರೇ ಭರಿಸತಕ್ಕದ್ದು.